Rx

## ಮದ್ದಿನ ಯುಕ್ತ ಬಳಕೆಗೆ ಯುಕ್ತಿಗಳು

- ತುರ್ತು ಸಂದರ್ಭಗಳನ್ನುಳಿದು, ರೋಗವನ್ನು ನಿಖರವಾಗಿ ಗುರುತಿಸದೆ ರೋಗಲಕ್ಷಣಗಳ ಆಧಾರದಲ್ಲಿ ಮೂರ್ನಾಲ್ಕು ರೋಗಗಳಿಗೆ ಒಟ್ಟಿಗೇ ಚಿಕಿತ್ಸೆ ನೀಡುವ ಅಭ್ಯಾಸವನ್ನು ನಿಲ್ಲಿಸಬೇಕು. ಎಲ್ಲಾ ಬೆರಕೆ ಮಾತ್ರೆಗಳ ಬಳಕೆಯನ್ನು ನಿಷೇಧಿಸಬೇಕು, ವೈದ್ಯರೂ ಅಂಥವನ್ನು ತಿರಸ್ಕರಿಸಬೇಕು.
- ಆಧುನಿಕ ಔಷಧಗಳನ್ನು ಆಧುನಿಕ ವೈದ್ಯ ವಿಜ್ಞಾನದಲ್ಲಿ ತರಬೇತಾದ (ಎಂಬಿಬಿಎಸ್ ಮತ್ತದರ ಸ್ನಾತಕೋತ್ತರ ತರಬೇತಿ) ವೈದ್ಯರು ಮಾತ್ರವೇ ಬಳಸಬೇಕು. ಬದಲಿ, ನಕಲಿ ಚಿಕಿತ್ಸಕರಾಗಲೀ, ಆಧುನಿಕ ವೈದ್ಯರ ಸಲಹೆಯಿಲ್ಲದೆ ಔಷಧದಂಗಡಿಗಳವರಾಗಲೀ ಅವನ್ನು ನೀಡಬಾರದು.
- ವಿಶ್ವ ಆರೋಗ್ಯ ಸಂಸ್ಥೆಯಿಂದ ಅಥವಾ ನಮ್ಮ ದೇಶದಲ್ಲಿ ಪ್ರಕಟಿಸಲಾಗಿರುವ ಅತ್ಯಗತ್ಯ ಔಷಧಗಳ ಪಟ್ಟಿಯಲ್ಲಿರುವ ಔಷಧಗಳನ್ನೇ ಹೆಚ್ಚಾಗಿ ಬಳಸಬೇಕು.
- ಹಳೆಯವಾದರೂ ಪರಿಣಾಮಕಾರಿಯಾದ, ಹೆಚ್ಚು ಅಡ್ಡ ಪರಿಣಾಮಗಳಿಲ್ಲದೆ ನಿರಪಾಯಕವೆನಿಸಿರುವ ಔಷಧಗಳನ್ನು ಹೆಚ್ಚಾಗಿ ಬಳಸಬೇಕು; ಅಂಥವು ಅಗ್ಗವೂ ಆಗಿರುತ್ತವೆ. ಔಷಧವು ಹೊಸದೋ, ದುಬಾರಿಯೋ ಆದ ಮಾತ್ರಕ್ಕೆ ಅದು ಹೆಚ್ಚು ಪರಿಣಾಮಕಾರಿಯೂ, ನಿರಪಾಯಕವೂ ಆಗಿರಲೇಬೇಕೆಂದಿಲ್ಲ.
- ಒಂದೇ ಔಷಧವು ಹಲವು ಬ್ರಾಂಡ್ ಹೆಸರುಗಳಲ್ಲಿ ಲಭ್ಯವಿದ್ದರೆ, ಅವುಗಳಲ್ಲಿ ಅಗ್ಗವಾದುದನ್ನು ಬಳಸಬಹುದು, ಮೂಲ ಜೆನೆರಿಕ್ ರೂಪದಲ್ಲಿ ಲಭ್ಯವಿದ್ದರೆ ಅದನ್ನೇ ಬಳಸಬಹುದು.
- ಜೆನೆರಿಕ್ ಔಷಧಗಳಿಗೆಂದು ತೆರೆಯಲಾಗಿರುವ ಜನೌಷಧಿ ಮಳಿಗೆಗಳಲ್ಲಿ ಅತ್ಯಗತ್ಯವಾದ ಔಷಧಗಳೆಂದು ಹೆಸರಿಸಲಾಗಿರುವವನ್ನು ಮಾರಬೇಕು. ಬೆರಕೆ ಮಾತ್ರೆಗಳಿಂದ ಗೊಂದಲಗಳಾಗುವ ಸಾಧ್ಯತೆಗಳು ಬಹಳಷ್ಟಿರುವುದರಿಂದ ಅಂಥವನ್ನು ಜೆನೆರಿಕ್ ರೂಪದಲ್ಲಿ ಮಳಿಗೆಗಳಲ್ಲಿ ಮಾರುವುದು ಅಥವಾ ಖರೀದಿಸುವುದು ಅಪೇಕ್ಷಣೀಯವಲ್ಲ,
- ರೋಗವುಳ್ಳವರು ಅಥವಾ ಅವರ ಸಂಬಂಧಿಕರು ನಿರ್ದಿಷ್ಟ ಔಷಧಗಳ ಬಗ್ಗೆ, ಚುಚ್ಚುಮದ್ದುಗಳ ಬಗ್ಗೆ, ದ್ರವ ಮರುಪೂರಣದ ಬಗ್ಗೆ ವೈದ್ಯರ ಮೇಲೆ ಒತ್ತಡ ಹೇರಕೂಡದು, ಚಿಕಿತ್ಸೆಯ ನಿರ್ಣಯಗಳನ್ನು ವೈದ್ಯರಿಗೇ ಬಿಡಬೇಕು.
- ಯಾವುದೇ ಕಾರಣಕ್ಕೂ ಸ್ವ ಚಿಕಿತ್ಸೆ ಮಾಡಿಕೊಳ್ಳಬಾರದು, ತಮ್ಮಷ್ಟಕ್ಕೇ ಚಿಕಿತ್ಸೆಯನ್ನು ಪುನರಾವರ್ತಿಸುವುದು, ಔಷಧಗಳ ಪ್ರಮಾಣಗಳನ್ನು ಬದಲಾಯಿಸುವುದು, ಅಥವಾ ನಿಲ್ಲಿಸುವುದು ಇತ್ಯಾದಿಗಳನ್ನು ಮಾಡಬಾರದು.
- ವೈದ್ಯರು ಔಷಧಗಳ ಉದ್ದುದ್ದ ಪಟ್ಟಿಯನ್ನು ಬರೆದರೆ, ಅಥವಾ ಬಹಳ ದುಬಾರಿಯಾದ ಔಷಧಗಳನ್ನು ಬರೆದರೆ ಅವುಗಳ ಬಗ್ಗೆ ವಿವರಣೆಯನ್ನು ಕೇಳಬೇಕು.





ದರಗಳನ್ನು ತಮ್ಮ ನಿಯಂತ್ರಣದಲ್ಲೇ ಇರಿಸಿಕೊಳ್ಳುತ್ತವೆ. ಉದಾಹರಣೆಗೆ, ತೊಂಬತ್ತರ ದಶಕದಲ್ಲಿ 30–40 ರೂಪಾಯಿಗಳಿಗೆ ಪ್ರಾಣಿಜನ್ಯ ಇನ್ಸುಲಿನ್ ದೊರೆಯುತ್ತಿತ್ತು. ಅದನ್ನು ಹಿಂಪಡೆದು, ಮಾನವ ಇನ್ಸುಲಿನ್ ಎಂಬ ಹೆಸರಲ್ಲಿ ಕೃತಕ ಇನ್ಸುಲಿನ್ ಅನ್ನು 150 ರೂ. ದರದಲ್ಲಿ ತರಲಾಯಿತು. ಈಗ ಅದರ ಮೇಲಿನ ಹಕ್ಕು ಸ್ವಾಮ್ಯತೆ ಇಲ್ಲವಾಗುತ್ತಿದ್ದಂತೆ, ಅದರಲ್ಲೇ ಅಷ್ಟಿಷ್ಟು ಮಾರ್ಪಾಡು ಮಾಡಿ, ಸದೃಶ ಇನ್ಸುಲಿನ್‌ಗಳೆಂಬ ಹೆಸರಲ್ಲಿ 450–1500 ರೂಪಾಯಿಗಳಿಗೆ ಮಾರಲಾಗುತ್ತಿದೆ.

ಹಿಂದಿನ ಸರ್ಕಾರಗಳು ಸಾರ್ವಜನಿಕ ರಂಗದಲ್ಲಿ ಔಷಧ ಸಂಸ್ಥೆಗಳನ್ನು ಸ್ಥಾಪಿಸಿದ್ದು ಮಾತ್ರವಲ್ಲ, ಔಷಧಗಳ ಮೇಲೆ ಖಾಸಗಿ ಸಂಸ್ಥೆಗಳ ಹಕ್ಕು ಸ್ವಾಮ್ಯತೆಯನ್ನು ಸಡಿಲಗೊಳಿಸುವ ನಿಯಮಗಳನ್ನೂ ಅತ್ಯಗತ್ಯವಾದ ಔಷಧಗಳ ದರಗಳನ್ನು ನಿಯಂತ್ರಿಸುವ ನಿಯಮಗಳನ್ನೂ ಜಾರಿಗೆ ತಂದಿದ್ದವು. ಅದರಿಂದಾಗಿ, ವಿದೇಶಿ ಕಂಪನಿಗಳು ಅಭಿವೃದ್ಧಿಪಡಿಸಿ, ಹಕ್ಕು ಸ್ವಾಮ್ಯತೆಯನ್ನು ಸಾಧಿಸುತ್ತಿದ್ದ ಅನೇಕ ಔಷಧಗಳನ್ನು ಭಾರತದ ಔಷಧ ಕಂಪನಿಗಳು ತಮ್ಮದೇ ವಿಧಾನದಿಂದ ಉತ್ಪಾದಿಸಿ, ಬಹಳಷ್ಟು ಕಡಿಮೆ ಬೆಲೆಗೆ ಜನರಿಗೆ ಒದಗಿಸುವುದಕ್ಕೆ ಸಾಧ್ಯವಾಗುತ್ತಿತ್ತು. ಔಷಧವನ್ನು ಒಂದಿಷ್ಟು ಮಾರ್ಪಡಿಸಿ ಹಕ್ಕನ್ನು ಸಾಧಿಸಹೊರಟಿದ್ದ ಅತಿ ದೊಡ್ಡ ಕಂಪನಿಯ ಪ್ರಯತ್ನವನ್ನು ಸರ್ವೋಚ್ಚ ನ್ಯಾಯಾಲಯವೇ ತಡೆದಿತ್ತು. ಹೀಗೆ, ಎಚ್‌ಐವಿ ನಿರೋಧಕ ಔಷಧಗಳು, ಹಲವು ಪ್ರತಿ ಜೈವಿಕಗಳು, ಕ್ಯಾನ್ಸರ್ ಚಿಕಿತ್ಸೆಯ ಔಷಧಗಳು ಮುಂತಾದ ಕೆಲವು ಅತಿ ದುಬಾರಿಯಾಗಿದ್ದ ಔಷಧಗಳನ್ನು ನಮ್ಮಲ್ಲಷ್ಟೇ ಅಲ್ಲದೆ, ಇತರ ಹಲವು ದೇಶಗಳ ಜನರಿಗೆ ಅತಿ ಕಡಿಮೆ ಬೆಲೆಯಲ್ಲಿ ಒದಗಿಸಿ ಜೀವವುಳಿಸಲು ಸಾಧ್ಯವಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ನಮ್ಮಲ್ಲಿನ ಈ ನಿಯಮಗಳನ್ನು ನಿಧಾನವಾಗಿ ದುರ್ಬಲಗೊಳಿಸಿ, ವಿದೇಶಿ ಕಂಪನಿಗಳ ಒತ್ತಡಕ್ಕೆ ಮಣಿಯುವ ಕೆಲಸಗಳಾಗುತ್ತಿವೆ. ನೆಹರೂ ಆಡಳಿತವು ಸ್ಥಾಪಿಸಿದ್ದ, ಏಷ್ಯಾದ ಅತಿ ದೊಡ್ಡ ಸಂಸ್ಥೆಯೆಂಬ ಹೆಗ್ಗಳಿಕೆಯಿದ್ದ, 'ಇಂಡಿಯನ್ ಡ್ರಗ್ಸ್ ಅಂಡ್ ಫಾರ್ಮಸ್ಯುಟಿಕಲ್ಸ್ ಸಂಸ್ಥೆ'ಯಂಥವು ಬಾಗಿಲು ಮುಚ್ಚಿಕೊಳ್ಳುವಲ್ಲಿಗೆ ಬಂದಿವೆ.

